# ನಾನೊಂದು ಬ್ರ್ಯಾಂಡ್!

**ಕೊಡಗಿನ ಹುಡುಗಿ ಹರ್ಷಿಕಾ ಕನ್ನಡವಷ್ಟೇ ಅಲ್ಲ, ಭೋಜಪುರಿ ಚಿತ್ರರಂಗದಲ್ಲಿಯೂ ಸಾಕಷ್ಟು ಹೆಸರು ಮಾಡಿದ್ದಾರೆ. ಸದ್ಯಕ್ಕೆ 'ಸ್ತಬ್ಧ' ಸಿನಿಮಾದಲ್ಲಿ ರಾಘವೇಂದ್ರ ರಾಜ್‌ಕುಮಾರ್ ಅವರ ಮಗಳಾಗಿ ನಟಿಸುತ್ತಿರುವ ಅವರ ಹಲವು ಸಿನಿಮಾಗಳು ತೆರೆಗೆ ಬರಲು ಸಜ್ಜಾಗಿವೆ.**

■ ಪದ್ಮನಾಭ ಭಟ್



'ಕಾಲ ಎಷ್ಟು ಬೇಗ ಸರಿದುಹೋಗುತ್ತದೆ ನೋಡಿ. ಸಿನಿಮಾರಂಗಕ್ಕೆ ಬಂದ ಆರಂಭದ ದಿನಗಳು ನಿನ್ನೆ ಮೊನ್ನೆಯೆಂಬಂತೆ ನೆನಪಿನಲ್ಲಿವೆ. ಆದರೆ ಈಗ ಎಷ್ಟೆಲ್ಲ ಬದಲಾಗಿದೆ. ನಾನು ಕನ್ನಡದ ಸಿನಿಮಾಗಳಲ್ಲಿ ನಟಿಸಿ ನಂತರ ಭೋಜಪುರಿ ಭಾಷೆಯ ಸಿನಿಮಾಗಳಲ್ಲಿ ನಟಿಸಿದೆ. ಅಲ್ಲಿ ಮೊದಲ ಸಿನಿಮಾ ಸೂಪರ್ ಹಿಟ್ ಆಯಿತು. ಈಗ ಮತ್ತೆ ಮೂರು ಸಿನಿಮಾಗಳಿಗೆ ಸಹಿ ಮಾಡಿದ್ದೇನೆ. ಅಲ್ಲಿ ನಾನು ಸ್ಟಾರ್ ಆಗಿದ್ದೇನೆ. ಇನ್ನು ಕನ್ನಡದಲ್ಲಿಯಂತೂ ನಾನೊಂದು ಬ್ರಾಂಡ್. ಹರ್ಷಿಕಾ ಪೂಣಚ್ಚ ಒಂದು ಬ್ರಾಂಡ್ ಆಗಿ ಬೆಳೆದಿದ್ದಾಳೆ. ನನ್ನನ್ನು ಹಾಗೆ ಬೆಳೆಸಿದ ಜನರನ್ನು ರಂಜಿಸುವುದೇ ನನ್ನ ಗುರಿ. ಅದು ಎಂಥ ಪಾತ್ರವೇ ಆಗಿರಲಿ, ಹೊಸಬರಿರಲಿ, ಹಳಬರಿರಲಿ, ಎರಡೂವರೆ ಗಂಟೆ ಜನರನ್ನು ರಂಜಿಸುವ ಕಥೆಯನ್ನು ನಾನು ಒಪ್ಪಿಕೊಂಡುಬಿಡುತ್ತೇನೆ. ಜನರು ನನ್ನನ್ನು ತೆರೆಯ ಮೇಲೆ ನೋಡಿದಾಗ ಅವರಿಗೆ ಖುಷಿಯಾಗಬೇಕು ಅಷ್ಟೆ!' ಹೀಗೆ ಒಂದೇ ಉಸಿರಿನಲ್ಲಿ ಮಾತಾಡುತ್ತಲೇ ಹೋದರು ಹರ್ಷಿಕಾ.

'ಸ್ತಬ್ಧ' ಸಿನಿಮಾದ ಚಿತ್ರೀಕರಣದ ಬಿಡುವಿನ ನಡುವೆಯೇ ಅವರು ಮಾತಿಗೆ ಸಿಕ್ಕಿದ್ದರು. ''ನಾನು ಶಿವಣ್ಣ ಅವರ ಜೊತೆಗೆ ನಟಿಸಿದ್ದೇನೆ. ಅಪ್ಪು ಸರ್ ಜೊತೆಗೂ ನಟಿಸಿದ್ದೇನೆ. 'ಜಾಕಿ' ಸಿನಿಮಾ ಸಮಯದಲ್ಲಿ ರಾಘಣ್ಣನೇ ನನಗೆ ಕರೆ ಮಾಡಿ, ''ಜಾಕಿ' ಅಂತೊಂದು ಸಿನಿಮಾ ಮಾಡ್ತಿದ್ದೀವಿ. ನಟಿಸಲು ಆಸಕ್ತಿ ಇದೆಯೇನಮ್ಮಾ?'' ಎಂದು ಕೇಳಿದ್ದರು. ಆಗ ನನಗೆ ನಂಬಿಕೆಯೇ ಬಂದಿರಲಿಲ್ಲ. ಈಗ ಮತ್ತೆ ರಾಘಣ್ಣ ಸಿಕ್ಕಾಗ ಆ ಎಲ್ಲ ನೆನಪುಗಳು ಮರುಕಳಿಸಿದವು. ಶಿವಣ್ಣ, ಅಪ್ಪು ಸರ್ ಇಬ್ಬರ ಜೊತೆಗೂ ನಟಿಸಿದ್ದೇನೆ. ರಾಘಣ್ಣ ಅವರ ಜೊತೆಗೊಂದು ನಟಿಸಲು ಅವಕಾಶ ಸಿಕ್ಕರೆ ಚೆನ್ನಾಗಿತ್ತಲ್ವಾ ಎಂದು ಯಾವಾಗಲೂ ಯೋಚಿಸುತ್ತಿದ್ದೆ. ಆ ಅವಕಾಶ ಈಗ ಸಿಕ್ಕಿದೆ. 'ಸ್ತಬ್ಧ' ಸಿನಿಮಾವನ್ನು ನಾನು ಒಪ್ಪಿಕೊಳ್ಳಲು ಮುಖ್ಯ ಕಾರಣ ರಾಘಣ್ಣ. ಅವರ ಜೊತೆಗೆ ನಟಿಸುವುದು ಒಂದು ಅದ್ಭುತ ಅನುಭವ'' ಎಂದು ವೇಗವಾಗಿ ಮಾತಾಡಿದ ಹರ್ಷಿಕಾ, 'ಸ್ತಬ್ಧ' ಸಿನಿಮಾದ ಕುರಿತೂ ಒಂದಿಷ್ಟು ಮಾಹಿತಿ ನೀಡಿದರು.

ಇದೊಂದು ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾವಂತೆ. ತಂದೆ, ಮಗಳು, ಅಳಿಯ ಈ ಮೂರು ಪಾತ್ರಗಳ ಸುತ್ತ ಕಥೆ ಬೆಳೆಯುತ್ತ ಹೋಗುತ್ತದೆ. 'ಇಲ್ಲಿ ಮೂವರಿಗೂ ಪರಸ್ಪರ ಸಾಕಷ್ಟು ಪ್ರೀತಿ ವಿಶ್ವಾಸಗಳು ಇವೆ. ಆದರೆ ಅವರ ನಡುವೆ ಒಂದು ಇಲ್ಯೂಷನ್ ಸೃಷ್ಟಿಯಾಗುತ್ತದೆ. ಅದರ ಪರಿಣಾಮ ಏನಾಗುತ್ತದೆ ಎನ್ನುವುದೇ ಈ ಸಿನಿಮಾದ ಕಥೆ' ಎನ್ನುತ್ತಾರೆ ಹರ್ಷಿಕಾ.

ಈ ಸಿನಿಮಾದ ಜೊತೆಗೆ ಅವರ ಅಭಿನಯದ ಇನ್ನಷ್ಟು ಸಿನಿಮಾಗಳು ತೆರೆಗೆ ಬರಲು ಸಜ್ಜಾಗುತ್ತಿವೆ. 'ತಾಯತ', 'ಹಗ್ಗ', 'ರೆಡಿ' 'ಕಾಲನಾಗಿಣಿ' ಅಂಥ ಕೆಲವು ಸಿನಿಮಾಗಳು. ಇವುಗಳಲ್ಲಿ 'ಕಾಲನಾಗಿಣಿ' ಸಿನಿಮಾ ಬಗ್ಗೆ ಹರ್ಷಿಕಾ ಅವರಿಗೆ ವಿಶೇಷ ನಿರೀಕ್ಷೆ ಇದೆ. 'ಇದೊಂದು ಮಹಿಳಾಪ್ರಧಾನ, ಪೀರಿಯಾಡಿಕಲ್ ಸಿನಿಮಾ. ಚಿಟ್ಟೆ ನಂತರ ಮತ್ತೆ ಅಷ್ಟೇ ವಿಶಿಷ್ಟವಾದ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ನಾಗಗಳ ದೇವಿಯಾಗಿ ಈ ಸಿನಿಮಾದಲ್ಲಿ ಕಾಣಿಸಿಕೊಂಡಿದ್ದೇನೆ' ಎಂದು ಅವರು ಉತ್ಸಾಹದಿಂದಲೇ ವಿವರಿಸುತ್ತಾರೆ.

'ನನಗೆ ಈಗ ಸಿಕ್ಕಿರುವ, ಸಿಗುತ್ತಿರುವ ಒಂದೊಂದು ಪಾತ್ರಗಳೂ ಅಷ್ಟೇ ಸುಂದರವಾಗಿವೆ. ಆ ವಿಷಯದಲ್ಲಿ ನಾನು ಅದೃಷ್ಟವಂತೆ' ಎಂದು ನಗುವ ಹರ್ಷಿಕಾ ಅವರು ಈ ಸಿನಿಮಾಗಳಿಗೆ ಜನರಿಂದ ಸಿಗುವ ಸ್ಪಂದನಕ್ಕೆ ಎದುರು ನೋಡುತ್ತಿದ್ದಾರೆ. ■